ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ್ : ಎಲ್ಲಾ ಕ್ಷೇತ್ರಗಳಲ್ಲೂ ಈ ಸಮಸ್ಯೆ ಇದೆ ಅವಕಾಶ ಕೊಡಿ.

ಅಧ್ಯಕ್ಷರು : ನೋಡ್ರಿ ಅಮರೇಗೌಡರವರೆ, ಎಲ್ಲಾ ಕ್ಷೇತ್ರದಲ್ಲೂ ಸಮಸ್ಯೆ ಇವೆ. ನೀವು ಬೇಕಾದರೆ ಬೇರೆ ರೂಪದಲ್ಲಿ ಕೇಳಿ ಅವಕಾಶ ಕೊಡುತ್ತೇನೆ. ಇದು ಚಿಕ್ಕೋಡಿಗೆ ಮಾತ್ರ ಸೀಮಿತವಾಗಿರಲಿ. ನಿಮ್ಮ ನಿಮ್ಮ ಕ್ಷೇತ್ರದ ಸಮಸ್ಯೆ ಬಗ್ಗೆ ನೀವು ಸಪರೇಟಾಗಿ ಕೇಳಿ. ಮುಂದಿನ ಪ್ರಶ್ನೆ ರೇವಣ್ಣನವರೆ ನೀವು ಕೇಳಿ. I will not allow, ಅವರು ಚಿಕ್ಕೋಡಿಗೆ ಸೀಮಿತವಾಗಿ ಕೇಳಿದ್ದಾರೆ. ಪ್ಲೀಸ್ ಇಲ್ಲಿ ಕೇಳಿ..

(ಗೊಂದಲ)

ರೇವಣ್ಣನವರೆ ನೀವು ಪ್ರಶ್ನೆ ಕೇಳಿ. ರೇವಣ್ಣನವರೆ next question call for ಮಾಡುತ್ತೇನೆ.

ಶಿವಲಿಂಗೇಗೌಡರವರೆ ಒಂದು ನಿಮಿಷ ಕುಳಿತುಕೊಳ್ಳಿ. ಹುಕ್ಕೇರಿಯವರೆ ನಿಮ್ಮದು ಇನ್ನು ಏನಾದರೂ ಕೇಳುವುದು ಇದೆಯೆ?

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಅರ್ಜಿಗಳನ್ನು ತಿರಸ್ಕರಿಸಿದಂಥ ಸದಲಗದ ಉಪತಹಶೀಲ್ದಾರ್‌ರವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜೆ.ಕರುಣಾಕರ ರೆಡ್ಡಿ : ನಾನು ಈ ಬಗ್ಗೆ ವರದಿ ತರಿಸಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ರೇವಣ್ಣನವರೆ ನಿಮ್ಮ ಪ್ರಶ್ನೆ ಕೇಳಿ.

ಪುನರ್ ವಸತಿ ಕೇಂದ್ರಗಳಿಗೆ ನೀಡಿರುವ ಅನುದಾನದ ಬಗ್ಗೆ.

34 (347) ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ)

ಅ) ಹೇಮಾವತಿ ಜಲಾಶಯ ಯೋಜನೆಯಲ್ಲಿ ಗುರುತಿಸಲಾಗಿರುವ ಪುನರ್ವಸತಿ ಕೇಂದ್ರಗಳೆಷ್ಟು? (ವಿವರಗಳನ್ನು ಒದಗಿಸುವುದು)

ಹೇಮಾವತಿ ಜಲಾಶಯ ಯೋಜನೆಯಲ್ಲಿ 50 ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಗುರುತಿಸಲಾಗಿರುವ ಪುನರ್ವಸತಿ ಕೇಂದ್ರಗಳನ್ನು ಸಂಪೂರ್ಣವಾಗಿ ಸ್ಥಳಾಂತರಗೊಳಿಸಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಹೇಮಾವತಿ ಜಲಾಶಯದ ಹಿನ್ನೀರಿನಿಂದ ಮುಳುಗಡೆಯಾದ ಗ್ರಾಮಗಳನ್ನು ಸಂಪೂರ್ಣವಾಗಿ ಸ್ಥಳಾಂತರಗೊಳಿಸಲಾಗಿದೆ.

ಇ) ಸ್ಥಳಾಂತರಗೊಂಡ ಪುನರ್ವಸತಿ ಕೇಂದ್ರಗಳಲ್ಲಿ ಎಲ್ಲಾ ಮೂಲ ಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ? ಇದಕ್ಕಾಗಿ ಕಳೆದ 3 ವರ್ಷಗಳಿಂದ ನಿಗದಿ ಪಡಿಸಲಾದ ಅನುದಾನವೆಷ್ಟು? ಮತ್ತು ಖರ್ಚು ಮಾಡಿದ ಹಣವೆಷ್ಟು?

ಮೂಲಭೂತ ಸೌಲಭ್ಯಗಳಾದ ಕಾಲೋನಿ ನಿರ್ಮಾಣ, ರಸ್ತೆ, ಚರಂಡಿ, ನೀರು ಸರಬರಾಜು, ಸಮುದಾಯ ಭವನ, ದೇವಸ್ಥಾನ ಹಾಗೂ ಶಾಲೆ ಕಟ್ಟಡಗಳ ನಿರ್ಮಾರ್ಣ ಮಾಡಿಕೊಡಲಾಗಿದೆ.

ಕ್ರ.ಸಂ	ಸಾಲು	ಅನುದಾನ (ಕೋಟಿಗಳಲ್ಲಿ)	ವೆಚ್ಚ (ಕೋಟಿಗಳಲ್ಲಿ)
1	2006–07	3.36	2.34
2	2007–08	13.50	9.51
3	2008–09	1.83	1.83

ಈ) ಪ್ರಸಕ್ತ ಸಾಲಿನಲ್ಲಿ ನಿಗದಿ ಪಡಿಸಲಾದ ಅನುದಾನವೆಷ್ಟು?

ಪ್ರಸಕ್ತ ಸಾಲಿನಲ್ಲಿ ರೂ.0.70 ಕೋಟಿಯ ಅನುದಾನವನ್ನು ಒದಗಿಸಲಾಗಿದೆ.

ಉ) ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ, ತಟ್ಟೇಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಬಂಡಿಹಳ್ಳಿ ಗ್ರಾಮಗಳ ಮನೆಗಳಿಗೆ 4(1), 5(ಎ) ವಿಚಾರಣೆ ಮತ್ತು 6(1) ಆಗಿ ಹಾಗೂ ಐತೀರ್ಪು ಆಗಿದ್ದು, ಇಲ್ಲಿಯವರೆಗೆ ಪುನರ್ವಸತಿ ಗ್ರಾಮಗಳ ಗ್ರಾಮಸ್ಥರಿಗೆ ಪರಿಹಾರ ಕೊಡದಿರಲು ಕಾರಣವೇನು, ಸದರಿ ಪುನರ್ವಸತಿ ಗ್ರಾಮಗಳ ಗ್ರಾಮಸ್ಥರಿಗೆ ಪರಿಹಾರವನ್ನು ಯಾವಾಗ ನೀಡಲಾಗುವುದು?

1) <u>ತಟ್ಟೇಕೆರೆ</u> :

1) ಈ ಗ್ರಾಮದ ಕೈಬಿಟ್ಟ ಮನೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಕಂಇ 141 ಭೂಸ್ವಾ 2007, ದಿನಾಂಕ: 17–11–2007, ರಲ್ಲಿ ರೂ. 1,48,81,674.00 ಗಳಿಗೆ ಅವಾರ್ಡ್ ಅನುಮೋದನೆಯಾಗಿರುತ್ತದೆ.

2) ಕೆಲವು ಗ್ರಾಮಸ್ಥರು ಅವಾರ್ಡ್‌ನಲ್ಲಿ ತಾರತಮ್ಯವಾಗಿದೆ ಎಂದು ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ಮನೆಗಳ/ನಿವೇಶನಗಳ ಮರು ಮೌಲ್ಯಮಾಪನ ಮಾಡಿ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಗೆ ಅನುಮೋದನೆ ನೀಡಿ ಶೀಘ್ರವಾಗಿ ಗ್ರಾಮಸ್ಥರಿಗೆ ಹಣ ಪಾವತಿಸಲಾಗುವುದು.

2) <u>ಬಂಡೀಹಳ್ಳಿ</u> :

ಬಂಡೀಹಳ್ಳಿ ಗ್ರಾಮವನ್ನು ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 120, ಆರ್‌ಇಹೆಚ್ 92, ದಿನಾಂಕ: 15-04-1999, ರಲ್ಲಿ ಸ್ಥಳಾಂತರಿಸಲು ಆದೇಶಿಸಿದೆ. ಅವಾರ್ಡ್ ಮೊತ್ತವಾದ ರೂ.3,18,54,790/- ಗಳಲ್ಲಿ ರೂ. 1,60,00,000/-ಗಳಿಗೆ ಇಲ್ಲಿಯವರೆಗೆ ಪರಿಹಾರವನ್ನು ನೀಡಲಾಗಿದೆ. ಬಾಕಿ ಮೊತ್ತ ರೂ.1,58,54,790/- ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ-1

ಕ್ರ ಸಂ	ಜಿಲ್ಲೆ	ತಾಲ್ಲೂಕು	ಪುನರ್ ವಸತಿ ಕಾಲೋನಿಯ ಹೆಸರು
1	ಹಾಸನ	ಹಾಸನ	ಬೀಕನಹಳ್ಳಿ
2			ಪದುಮನಹಳ್ಳಿ
3			ಆಂಜನೇಯಪುರ
4			ಶೆಟ್ಟಿಹಳ್ಳಿ
5			ಮುಕುಂದೂರು ಹೊಸಹಳ್ಳಿ
6		ಆಲೂರು	ಬ್ಯಾಬ-1
7			ಬ್ಯಾಬ-2
8			ಬ್ಯಾಬ-4
9			ಸಿಂಗಾಪುರ
10			ದಾನಿಹಳ್ಳಿ
11			ಹಳುಹಳ್ಳಿ
12			ಮದಗೆರೆ
13			ಕುಪ್ಪೆ
14			ಕ್ಯಾತನಹಳ್ಳಿ
15		ಹೊಳೆನರಸೀಪುರ	ಚೊಡ್ಡಬ್ಯಾಗತಹಳ್ಳಿ
16			ಹಿರೇಬೆಳಗುಳಿ
17			ದೊಡ್ಡಕುಂಚ
18			ಒಂಟೀಗುಡ್ಡ
19			ಒಡರಹಳ್ಳಿ ಅಗ್ರಹಾರ
20		ಅರಕಲಗೂಡು	ಮಲ್ಲತಮ್ಮನಹಳ್ಳಿ
21			ಹೊನಗೊಂಡನಹಳ್ಳಿ
22			ಮರಡಿ
23			ಚೌಡೇನಹಳ್ಳಿ
24			ಚಿಕ್ಕಅರಕಲಗೂಡು

25			ಚಿಕ್ಕರಕಲಗೂಡು ಬಡಾವಣೆ
26			ವಿಜಾಪುರ –ಎ
27			ವಿಜಾಪುರ–ಬಿ
28			ಕೆಂದಿಣ್ಣೆ
29			ದಾಸನಪುರ
30			ದಾಸನಕೊಣೆನೂರು
31			ಕೆಶವತ್ತೂರು (ನೆಹರೂ ನಗರ)
32			ಅರಸಿನಕಟ್ಟೆ ಕಾವಲು
33			ಸುಳುಗೋಡು ಸೋಮವಾರ
34			ಸೀಗೋಡು (ಹೊಸನಗರ)
35			ಬೆಳ್ಳಾಮೆಕಂಟೇನಹಳ್ಳಿ (ಮರಿಯಾನಗರ)
36			ಬೀರನಹಳ್ಳಿ (ರಂಗನಾಥಪುರ)
37			ಗೊಬ್ಬಳಿ (ಚಂದ್ರಾನಗರ)
38	ಚಿಕ್ಕಮಗಳೂರು	ಚಿಕ್ಕಮಗಳೂರು	ಬೋಯನಹಳ್ಳಿ
39	ಮಡಿಕೇರಿ	ಸೋಮವಾರಪೇಟೆ	ಎಲಕನೂರು
40	ಹಾಸನ	ಹಾಸನ	ಚೌಡಹಳ್ಳಿ
41			ತಮ್ಮಗಾನಹಳ್ಳಿ
42		ಆಲೂರು	ಚಟ್ಟನಹಳ್ಳಿ
43			ಎಡವನಹಳ್ಳಿ
44			ಮೇರ್ವೆ
45			ಬಸವನಹಳ್ಳಿ
46			ತಿಪ್ಪನಹಳ್ಳಿ
47			ಪುರಬೈರವನಹಳ್ಳಿ
48			ಹೊನ್ನವಳ್ಳಿ
49			ಹರಿಹಳ್ಳಿ
50		ಅರಕಲಗೂಡು	ಮುದಿಗೆರೆ

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಹೇಮಾವತಿ ಜಲಾಶಯ ಯೋಜನೆಯಲ್ಲಿ 50 ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ತಟ್ಟೇಕೆರೆ ಹಾಗೂ ಬಂಡೀಹಳ್ಳಿ ಗ್ರಾಮಗಳ ಮನೆಗಳಿಗೆ ಈಗಾಗಲೇ ಐತೀರ್ಪು ಆಗಿರುತ್ತದೆ. ಏಕೆಂದರೆ, ಇವರು ಕೊಟ್ಟಿರುವ ಅನುಬಂಧದಲ್ಲಿ 50 ಹಳ್ಳಿಗಳ ಹೆಸರುಗಳನ್ನು ಕೊಡಲಾಗಿದೆ. ಈ 50 ಹಳ್ಳಿಗಳಲ್ಲಿ ಚನ್ನರಾಯಪಟ್ಟಣದ

ಹೆಸರೇ ಇಲ್ಲ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಸುಮಾರು 15 ರಿಂದ 20 ಹಳ್ಳಿಗಳು ಮುಳುಗಡೆಯಾಗಿವೆ. ಅಧಿಕಾರಿಗಳು ಸದನಕ್ಕೆ ಯಾವ ರೀತಿಯಾಗಿ ತಪ್ಪು ಮಾಹಿತಿ ಕೊಡುತ್ತಿದ್ದಾರೆನ್ನುವುದಕ್ಕೆ ನಾನು ಈ ಮಾತು ಹೇಳುತ್ತಿದ್ದೇನೆ. ಸದನಕ್ಕೆ ತಪ್ಪು ಮಾಹಿತಿ ಕೊಟ್ಟಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಮಾನ್ಯ ಸಭಾಧ್ಯಕ್ಷರೆ ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ನೀಡಲಿ. ಉದಾ: ಬಂಡೀಹಳ್ಳಿ ಎನ್ನುವ ಗ್ರಾಮ ಏನು ಇದೆ ಅಲ್ಲಿ ಎಲ್ಲರೂ ಗಾರೆ ಕೆಲಸ ಮಾಡುವವರು. ಚನ್ನರಾಯಪಟ್ಟಣ ತಾಲ್ಲೂಕು ಬಂಡೀಹಳ್ಳಿ ಗ್ರಾಮದಲ್ಲಿ ಗಾರೆ ಕೆಲಸ ಮಾಡಿ ಕೂಲಿ ಕೆಲಸ ಮಾಡುವಂಥವರು. ಇವರು ಹಣ ತೆಗೆದುಕೊಳ್ಳುವುದಕ್ಕೆ ಸುಮಾರು ಎರಡು ವರ್ಷಗಳಿಂದ ತಿರುಗುತ್ತಿದ್ದಾರೆ. 4(1) ಆಗಿದೆ, 6(1) ಆಗಿದೆ, ಆವಾರ್ಡ್ ಆಗಿದೆ. ಫೈನಲ್ ನೋಟಿಫೀಕೇಷನ್ ಆಗಿ ಆವಾರ್ಡ್ ಆದ ನಂತರ ದುಡ್ಡು ತೆಗೆದುಕೊಳ್ಳುವುದಕ್ಕೆ ಇವರು ಅಧಿಕಾರಿಗಳಿಗೆ 10 ರಿಂದ 20% ದುಡ್ಡು ಕೊಟ್ಟು ಅಲೆದಾಡುತ್ತಿದ್ದಾರೆ. ಈ ರೀತಿಯಾದರೆ ಆ ಅಧಿಕಾರಿಗಳು ಯಾವ ತರಹ ಕೆಲಸ ಮಾಡುತ್ತಾರೆ? ಮೊನ್ನೆ ದಿವಸ ಮಾನ್ಯ ಸಚಿವರು ಗೊರೂರಿಗೆ ಬಂದಂಥ ಸಂದರ್ಭದಲ್ಲಿ ಈ ವಿಷಯವನ್ನು ಅವರ ಗಮನಕ್ಕೆ ತಂದಾಗ ಇನ್ನು 15 ದಿವಸಗಳಲ್ಲಿ ಮಾಡುತ್ತೇನೆಂದು ಭರವಸೆಯನ್ನು ಸಹ ಕೊಟ್ಟಿದ್ದಾರೆ. ಇದಕ್ಕೆ ನನ್ನದೇನು ಅಭ್ಯಂತರವಿಲ್ಲ. ನಾನು ಈ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ತಟ್ಟೇಕೆರೆ ಗ್ರಾಮದಲ್ಲಿ ಯಾರೋ ಒಬ್ಬ ಅರ್ಜಿ ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ತನಿಖೆ ಮಾಡಿಕೊಳ್ಳಿ, ನಾನೇನು ಬೇಡವೆಂದು ಹೇಳುವುದಿಲ್ಲ. ಯಾರೋ ಒಬ್ಬ ಉದ್ದೇಶ ಇಟ್ಟುಕೊಂಡು ಬೇಕೆಂದು ಅರ್ಜಿ ಕೊಟ್ಟರೆ ಅಲ್ಲಿರತಕ್ಕಂಥ 50 ಮನೆಗಳ ಕೆಲಸವನ್ನು ನಿಲ್ಲಿಸುತ್ತೀರಾ? ತಟ್ಟೇಕೆರೆಯದು ಈಗಾಗಲೇ 4(1) ಮತ್ತು 6(1) ನೋಟಿಫಿಕೇಷನ್ ಆಗಿದೆ ಮತ್ತೆ ಅವಾರ್ಡ್ ಕೂಡ ಆಗಿರುವುದರಿಂದ ಅಂತಿಮವಾಗಿ ಕೊಡುವುದಕ್ಕೆ ತೊಂದರೆ ಏನಾಗಿದೆ? ಅಲ್ಲಿ ಏನಾದರೂ ತೊಂದರೆ ಇದ್ದರೆ ಹೇಳಿ? ಅಲ್ಲಿಗೆ ಜಿಲ್ಲಾಧಿಕಾರಿಯವರು ಹೋಗಿ ಪ್ರತಿ ಮನೆಯ ಫೋಟೋ ಮತ್ತು ವಿಡಿಯೋ ಕೂಡ ತೆಗೆಸಿದ್ದಾರೆ. ಹಾಗೆಯೇ ಕಂದಾಯ ಇಲಾಖೆಯಿಂದ ನೀರಾವರಿ ನಿಗಮನಕ್ಕೆ ಕಳುಹಿಸಿಕೊಟ್ಟಿದ್ದಾರೆ. ಈಗ ದುಡ್ಡು ಕೊಡುವುದಕ್ಕೆ ಏನು ತೊಂದರೆ? ಎನ್‌ಓಸಿ ತೆಗೆದುಕೊಳ್ಳಬೇಕಾದರೆ ಏನಾದರು ದುಡ್ಡು ಕೊಡಬೇಕೆ? ಏನು ಕಾರಣ ಎಂಬುದನ್ನು ತಾವು ಇಲ್ಲಿ ಹೇಳಬೇಕು. ಮತ್ತೆ ಇನ್ನು ಎಷ್ಟು ದಿವಸದಲ್ಲಿ ಕೊಡಿಸುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು? ನೀವು ಕೊಟ್ಟಿರುವ ಮಾಹಿತಿಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿಗೆ ಸಂಬಂಧಪಟ್ಟಂತಹ ಹಳ್ಳಿಗಳ ಹೆಸರುಗಳು ಇಲ್ಲ. ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರುವ ಸುಮಾರು 20 ಹಳ್ಳಿಗಳ ಒಂದು ಹೆಸರು ಕೂಡ ಇದರಲ್ಲಿಲ್ಲ. ಈ ರೀತಿಯಾಗಿ ಸದನಕ್ಕೆ ಸುಳ್ಳು ಮಾಹಿತಿ ಕೊಟ್ಟಿರುವುದಕ್ಕೆ ತಾವು ಏನು ಹೇಳುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು. ಇದನ್ನು ಎಷ್ಟು ದಿವಸದಲ್ಲಿ ಮುಗಿಸಲಾಗುತ್ತದೆಂಬುದನ್ನು ದಯಮಾಡಿ ಹೇಳಬೇಕು. ಮತ್ತೆ ಹಾಸನ ತಾಲ್ಲೂಕಿಗೆ

ಸೇರುವ ಮುಕುಂದೂರು ಹೊಸಹಳ್ಳಿಗೆ ಹಣ ಕೊಟ್ಟಿಲ್ಲ. ಈಗಾಗಲೇ ಮುಕುಂದೂರು ಹೊಸಹಳ್ಳಿಗೆ 4(1) ಮತ್ತು 6(1) ನೋಟಿಫಿಕೇಷನ್ ಆಗಿದ್ದರೂ ಕೂಡ ಹಣ ಕೊಡುವುದಕ್ಕೆ ಏನು ತೊಂದರೆ? ಮತ್ತೆ ಸ್ಥಳಾಂತರಗೊಂಡ ಪುನರ್ವಸತಿ ಕೇಂದ್ರಗಳಲ್ಲಿ ರಸ್ತೆ ಮತ್ತು ಸಮುದಾಯ ಭವನ ಹಾಗೂ ದೇವಸ್ಥಾನ ಮಾಡಿಕೊಡುವುದಕ್ಕೆ ಕಳೆದ ವರ್ಷ ಎಷ್ಟು ಹಣ ಇಡಲಾಗಿತ್ತೆಂದು ಕೇಳಲಾಗಿತ್ತು. 2006–07ರಲ್ಲಿ 3.36 ಕೋಟಿ ಅನುದಾನದಲ್ಲಿ 2.34 ಕೋಟಿ ವೆಚ್ಚವಾಗಿದೆ. 2007–08ರಲ್ಲಿ 13.50 ಕೋಟಿ ಅನುದಾನದಲ್ಲಿ 9.51 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ ಮತ್ತೆ 2009–09 1.83 ಕೋಟಿ ರೂಪಾಯಿ ಅನುದಾನದಲ್ಲಿ 1.83 ಕೋಟಿ ರೂಪಾಯಿ ವೆಚ್ಚವಾಗಿದೆ ಎಂದು ಮಾಹಿತಿ ಕೊಟ್ಟಿದ್ದಾರೆ. ಆದರೆ, ಈ ವರ್ಷ ಅಂದರೆ, 2009–10ನೇ ಸಾಲಿನಲ್ಲಿ ಇದಕ್ಕೆ 10 ಪೈಸೆ ಹಣ ಇಟ್ಟಿಲ್ಲ. ಮತ್ತೆ ಕಾವೇರಿ ಬೇಸಿನ್‌ಗೆ ಈ ಸಾರಿ ಹಣವನ್ನೇ ಇಟ್ಟಿಲ್ಲ. ಹಿಂದಿನ ಸರ್ಕಾರ ಇದಕ್ಕಾಗಿ ಸುಮಾರು 700 ರಿಂದ 800 ಕೋಟಿ ರೂಪಾಯಿ ಹಣವನ್ನು ಇಟ್ಟಿತ್ತು. ಆದರೆ, ಈ ವರ್ಷ ಸಂಬಳ ಕೊಡುವುದಕ್ಕಾಗಿ 200 ಕೋಟಿ ರೂಪಾಯಿ ಇಲ್ಲ. ಕೊಟ್ಟಿರುವ ಹಣ ಕೇವಲ ಸಂಬಳ ಕೊಡುವುದಕ್ಕಾಗುತ್ತದೆ ಹೊರತು ಬೇರೆ ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಿಲ್ಟ್ ತೆಗೆಯುವುದಕ್ಕೆ ನಾನು ಹೇಳಿದ್ದೆ.

ಅಧ್ಯಕ್ಷರು:– ಮಾನ್ಯ ರೇವಣ್ಣನವರೆ, ಪುನರ್ವಸತಿ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಇದೆ. ಆದ್ದರಿಂದ, ಇದಕ್ಕೆ ಸೀಮಿತವಾಗಿ ಮಾತ್ರ ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಪುನರ್ವಸತಿ ಮತ್ತು ಸಂಬಳ ಕೊಡುವುದಕ್ಕೆ ಇವರ ಹತ್ತಿರ ದುಡ್ಡು ಇಲ್ಲದೇ ಇರುವಾಗ ಈ ಎಲ್ಲಾ ವಿಷಯಗಳೆಲ್ಲವನ್ನು ನಾನು ಹೇಳಬೇಕಾಗುತ್ತದೆ. ಕಾವೇರಿ ಬೇಸಿನ್‌ನಲ್ಲಿ ಕೇವಲ ಸಂಬಳ ಕೊಡುವುದಕ್ಕೆ ಮಾತ್ರ ದುಡ್ಡು ಇಟ್ಟಿದ್ದಾರೆ. ಸಂಬಳ ಬಿಟ್ಟು ಬೇರೆ ಕೆಲಸಕ್ಕೆ ಹಣ ಇಟ್ಟಿಲ್ಲ. ಆದ್ದರಿಂದ, ಈ ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ:– ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದರಿಂದ ನಾನು ಪ್ರಶ್ನೆಯನ್ನು ಕೇಳಬೇಕಾಗಿದೆ.

ಅಧ್ಯಕ್ಷರು:– ಮಾನ್ಯ ರೇವಣ್ಣನವರು ಕೇಳಿರುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲಿ. ಆನಂತರ ನಿಮಗೂ ಕೂಡ ಅವಕಾಶ ಕೊಡುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ:– ಸನ್ಮಾನ್ಯ ಅಧ್ಯಕ್ಷರೆ, submerge ನಿಂದ ಆಗಿರುವ 50 ಪುನರ್ವಸತಿ ಕೇಂದ್ರಗಳ ಬಗ್ಗೆ ನಾವು ಉತ್ತರ ಕೊಟ್ಟಿದ್ದೇವೆ. ಇದು ಸರಿಯಾದ ಉತ್ತರವಾಗಿದೆ. ಆದರೆ, ಸೀಪೇಜ್ ವಾಟರ್‌ನಿಂದ ಆಗಿರುವ ಶಿತಪೀಡಿತ ಹಳ್ಳಿಗಳ ಹೆಸರುಗಳನ್ನು ತಾವು ಈಗ ಹೇಳುತ್ತಿದ್ದೀರಿ. ನೀವು ಏನು ಪ್ರಶ್ನೆಯನ್ನು ಕೇಳಿದ್ದೀರೋ ಅದಕ್ಕೆ ಸರಿಯಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ಮತ್ತೆ ತಾವು

ತಟ್ಟೇಕೆರೆ ಮತ್ತು ಬಂಡೀಹಳ್ಳಿಯ ಬಗ್ಗೆ ಹೇಳಿದ್ದೀರಿ. ತಟ್ಟೇಕೆರೆ ಗ್ರಾಮದಲ್ಲಿ ಅವಾರ್ಡ್ ಆಗಿರತಕ್ಕಂಥದ್ದಲ್ಲಿ ತಾರತಮ್ಯವಾಗಿದೆ ಎಂದು ಗ್ರಾಮಸ್ಥರು ಹೇಳಿದ್ದಾರೆ. ಇದರ ಬಗ್ಗೆ ವಿಚಾರಣೆ ಕೂಡ ಮಾಡಿಸಿದ್ದೇವೆ. ಇದು ಸರಿಯಾಗಿದೆ ಎಂದು ಗೊತ್ತಾಯಿತು. ಅದಕ್ಕೆ ಈಗಗಲೇ ಹಣವನ್ನು ಸಹ ನಿಗದಿ ಮಾಡಿದ್ದೇವೆ. 1.48 ಕೋಟಿ ರೂಪಾಯಿಗೆ ಅನುಮೋದನೆ ಕೂಡ ದೊರಕಿದೆ. ಮೊನ್ನೆ ದಿವಸ ಸಭೆಯಲ್ಲಿ ತಾವು ಕೂಡ ಇದ್ದಾಗ ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳಿಗೆ ಆದೇಶವನ್ನು ಸಹ ಕೊಟ್ಟಿದ್ದೇನೆ. ಇನ್ನು 15 ದಿವಸದಲ್ಲಿ ತಟ್ಟೇಕೆರೆ ಮತ್ತು ಬಂಡೀಹಳ್ಳಿಗೆ ದುಡ್ಡನ್ನು ಬಿಡುಗಡೆ ಮಾಡುತ್ತೇವೆ. ಅಲ್ಲಿ ಯಾವುದೊಂದು ಮನೆಗೋಸ್ಕರ ತೊಂದರೆ ಆಗಬಾರದೆಂದು ಮತ್ತು ಅಲ್ಲಿ ಕೇವಲ 4 ಲಕ್ಷ ರೂಪಾಯಿ ಮಾತ್ರ ವ್ಯತ್ಯಾಸ ಇದ್ದುದ್ದರಿಂದ ಈ ಹಣವನ್ನು ಹಿಡಿದುಕೊಂಡು ಉಳಿದ ಹಣವನ್ನು ಕೂಡಲೇ ಬಿಡುಗಡೆ ಮಾಡಿ ಎಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇನೆ. ಇನ್ನು 15 ದಿವಸದಲ್ಲಿ ಈ ಹಣ ಹೇಮಾವತಿ ಡಿವಿಜನ್‌ಗೆ ಪಾವತಿ ಆಗುತ್ತದೆ. ಕಾವೇರಿ ನೀರಾವರಿ ನಿಗಮದ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ ಕೇವಲ ಸಂಬಳಕ್ಕಾಗಿ ಹಣ ಇಟ್ಟಿದ್ದಾರೆಂದು ಹೇಳಿದ್ದಾರೆ. ಈ ರೆಕಾರ್ಡ್ ಸರಿಯಾಗಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಆ ರೀತಿಯಾದಂಥವುಗಳು ಯಾವುದೂ ಇಲ್ಲವೆಂದು ಹೇಳುತ್ತೇನೆ. ಕಳೆದ ವರ್ಷ ಎಷ್ಟು ದುಡ್ಡನ್ನು ಇಡಲಾಗಿತ್ತೋ ಹೆಚ್ಚು ಕಡಿಮೆ ಅಷ್ಟೇ ದುಡ್ಡನ್ನು ಸಹ ಈ ಸಾರಿ ಇಡಲಾಗಿದೆ. ಈವರ್ಷ 662.72 ಕೋಟಿ ರೂಪಾಯಿ ಒದಗಿಸಿದ್ದೇವೆ. ಇದರಲ್ಲಿ 421 ಕೋಟಿ ರೂಪಾಯಿ ಕೇವಲ ಕಾಮಗಾರಿಗಾಗಿ ಖರ್ಚು ಮಾಡಲಾಗುತ್ತದೆ. ನಾವು ಈಗಾಗಲೇ ಬ್ಯಾಂಕ್‌ನವರ ಜೊತೆ ಮಾತನಾಡಿ ಪ್ರೊಜೆಕ್ಟ್ ಸ್ಪೆಸಿಫಿಕ್‌ಗೆ ಸುಮಾರು 600 ಕೋಟಿ ರೂಪಾಯಿ ಕೊಡಬೇಕೆಂದು ಹೇಳಿದ್ದೇವೆ. ಇದಕ್ಕೆ ಅವರೂ ಕೂಡ ಒಪ್ಪಿಕೊಂಡಿದ್ದಾರೆ. ಈ ಪ್ರಸ್ತಾವನೆಯನ್ನು ಈಗಾಗಲೇ ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಆದೇನೆಂದರೆ, ಕಾವೇರಿ ನೀರಾವರಿ ಯೋಜನೆಗಳಲ್ಲಿ ಈಗ ಚಾಲ್ತಿಯಲ್ಲಿರುವಂಥ ಎಲ್ಲಾ ಯೋಜನೆಗಳಿಗೆ ಈ ವರ್ಷ ಎಷ್ಟು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿದೆಯೋ ಅದರಲ್ಲಿ ಯಾವುದೇ ಕಾಮಗಾರಿಗಳನ್ನು ನಿಲ್ಲಿಸುವುದಿಲ್ಲ, ಈ ಎಲ್ಲಾ ಕಾಮಗಾರಿಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳುತ್ತೇವೆ. ಆದ್ದರಿಂದ, ಇದರ ಬಗ್ಗೆ ತಾವು ಏನು ಚಿಂತೆ ಮಾಡತಕ್ಕಂತ ಅವಶ್ಯಕತೆ ಇಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:- ಮಾನ್ಯ ಪುಟ್ಟೇಗೌಡರೆ, ತಾವೂ ಕೂಡ ಪ್ರಶ್ನೆಯನ್ನು ಕೇಳಿ. ಎರಡು ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಸವರಾಜ ಬೊಮ್ಮಾಯಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರದು ಇನ್ನೊಂದು ಪ್ರಶ್ನೆ ಇದೆ. ಇದಕ್ಕೆ ಉತ್ತರ ಕೊಡುತ್ತೇನೆ. ಆನಂತರ ಅವರು ಸಹ

ಕೇಳಲಿ. ಈ ವರ್ಷ ಪುನರ್ವಸತಿಗಾಗಿ ಹಣವನ್ನು ಕಡಿಮೆ ಇಟ್ಟಿದ್ದೀರೆಂದು ಹೇಳಿದ್ದಾರೆ. ಇದು ಸತ್ಯ ಇದೆ. ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ನೀವು ಅತೀ ಹೆಚ್ಚಿನ ದುಡ್ಡನ್ನು ಅದಕ್ಕೆ ಒದಗಿಸಿದ್ದೀರಿ. ಸುಮಾರು 13 ರಿಂದ 14 ಕೋಟಿ ರೂಪಾಯಿಯನ್ನು ನಿಮ್ಮ ಕಾಲದಲ್ಲಿ ಖರ್ಚು ಮಾಡಿದ್ದೀರಿ. ಅಲ್ಲಿ ಪುನರ್ವಸತಿ ಕೇಂದ್ರಗಳನ್ನು ಮಾಡಿ ಬಹಳ ವರ್ಷಗಳಾಗಿವೆ. ಆದ್ದರಿಂದ, ಸತತವಾಗಿ ಅದೇ ಹಳ್ಳಿಗಳಿಗೆ ಪ್ರತಿ ವರ್ಷ ಪುನರ್ವಸತಿಗಾಗಿ ಕೋಟಿಗಟ್ಟಲೆ ದುಡ್ಡು ಖರ್ಚು ಮಾಡುವುದು ಎಷ್ಟು ಸಮಂಜಸವೆಂದು ತಾವೇ ಹೇಳಿ? ನೀವು ಈಗಾಗಲೇ ಎರಡು ವರ್ಷ ಹೆಚ್ಚಿಗೆ ದುಡ್ಡನ್ನು ಕೊಟ್ಟಿದ್ದಿರಿ. ಆದರೆ, ಈ ವರ್ಷ ಬಾಕಿ ಇರುವ ಕೆಲಸಕ್ಕೆ ನಾವು ದುಡ್ಡನ್ನು ಒದಗಿಸಿದ್ದೇವೆ. ಮತ್ತೆ ಮೊನ್ನೆದಿವಸ ನಡೆದಂಥ ಸಭೆಗೆ ಕೆಲವು ಗ್ರಾಮಸ್ಥರು ಬಂದು ಅಲ್ಲಿ ಕೆಲಸ ಆಗಿಲ್ಲವೆಂದು ದೂರಿದ್ದಾರೆ. ಅಲ್ಲಿ ಸಂಪೂರ್ಣವಾಗಿ ಎಸ್ಟಿಮೆಟ್ ಮಾಡುವುದಕ್ಕೆ ನಾನು ಹೇಳಿದ್ದೇನೆ. ಈ ವರ್ಷ ಪುನರ್ವಸತಿಗಾಗಿ ಎಷ್ಟು ದುಡ್ಡು ಬೇಕಾಗುತ್ತದೆಯೋ ಅದನ್ನು ಖಂಡಿತವಾಗಿ re-appropriationನಲ್ಲಿ ಒದಗಿಸುತ್ತೇವೆ. ಹೇಮಾವತಿ ಡಿವಿಜನ್‌ನಲ್ಲಿನ ಪುನರ್ವಸತಿ ಕೇಂದ್ರಗಳಲ್ಲಿನ ರಸ್ತೆ, ಸಮುದಾಯ ಭವನಕ್ಕೆ ಈ ವರ್ಷ ಎಷ್ಟು ದುಡ್ಡು ಬೇಕಾಗಿದೆಯೋ ಅಷ್ಟನ್ನು ಖಂಡಿತವಾಗಿ ಹೆಚ್ಚಿಗೆ ಮಾಡಿ ಸದರಿ ಕೆಲಸವನ್ನು ಮಾಡುತ್ತೇವೆ. ಆದರೆ, ತಾವು ಒಂದು ವಿಷಯವನ್ನು ಗಮನಿಸಬೇಕು, ಅದೇನೆಂದರೆ, ಇವೆಲ್ಲಾ ಹಳೆಯ ಪುನರ್ವಸತಿಗಳಾಗಿದ್ದು, ಇವುಗಳಿಗೆ ಸತತವಾಗಿ ಅಂದರೆ ನಿರಂತರವಾಗಿ ಹಣ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತೆ ಕೆಲವು ಕಡೆ ದೇವಸ್ಥಾನಗಳಿಗೆ ಹಣ ಕೇಳುತ್ತಿದ್ದಾರೆ. ಆದರೆ, ನೀರಾವರಿ ವ್ಯಾಪ್ತಿಯಲ್ಲಿ ಬರುವಂಥ ಸಮುದಾಯ ಭವನ ಮತ್ತು ದೇವಸ್ಥಾನಗಳಿಗೆ ಹಣ ಕೊಡುವುದಕ್ಕೆ ಅವಕಾಶ ಇದೆ. ಆದರೆ, ಕಲವು ಕಡೆ ಈ ವ್ಯಾಪ್ತಿಯಲ್ಲಿ ಬಾರದೆ ಇದ್ದರೂ ಕೂಡ ಹಣ ಕೇಳುತ್ತಿದ್ದಾರೆ. ಇಂಥವುಗಳಿಗೆ ಒದಗಿಸುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು:– ಮಾನ್ಯ ರೇವಣ್ಣನವರೆ, ಮಾನ್ಯ ಪುಟ್ಟೇಗೌಡರೂ ಕೂಡ ಅವರ ಪ್ರಶ್ನೆಯನ್ನು ಕೇಳಲಿ. ಏಕೆಂದರೆ, ನಿಮ್ಮ ಪ್ರಶ್ನೆ ಮತ್ತು ಅವರ ಪ್ರಶ್ನೆಗೆ ಕನೆಕ್ಷನ್ ಇದೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮುಳುಗಡೆಯಾಗಿರುವ 50 ಹಳ್ಳಿಗಳ ಪುನರ್ವಸತಿಗೆ ಸಂಬಂಧಪಟ್ಟಂತೆ ಮೊದಲನೆ ಪ್ರಶ್ನೆಯಲ್ಲಿ ಉತ್ತರ ಕೊಡಲಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ತಪ್ಪು ಉದಾಹರಣೆ ನೀಡಿರುವುದರಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಬಯಸುತ್ತೇನೆ. ಹಾಸನ ತಾಲ್ಲೂಕಿನ ಮುಕುಂದೂರು ಹೊಸಹಳ್ಳಿ ಹೇಮಾವತಿ ಡ್ಯಾಂನಿಂದ ಮುಳುಗಡೆಯಾಗಿದೆಯೇ? ಹೇಮಾವತಿ ಡ್ಯಾಂನಿಂದ ಕೆಳಗಡೆ ಈ ಹಳ್ಳಿ ಬರುತ್ತದೆ. ಮತ್ತೆ ಹೊಳೆನರಸೀಪುರ ತಾಲ್ಲೂಕಿನ ಬೊಡ್ಡಬ್ಯಾಗತಹಳ್ಳಿ ಮುಳುಗಡೆಯಾಗಿದೆಯೇ? ಆದರೆ, ಮುಳುಗಡೆಯಾಗಿದೆ ಎಂದು ಮಾಹಿತಿಯಲ್ಲಿ ಹೇಳಿದ್ದೀರಿ. ಆದರೆ, ಇದು ಮುಳುಗಡೆಯಾಗಿಲ್ಲ. ಬೊಡ್ಡಬ್ಯಾಗತಹಳ್ಳಿ ನೀರಾವರಿ ಸೌಲಭ್ಯವಿಲ್ಲದ ಪ್ರದೇಶವಾಗಿದೆ.

ಈ ಹಳ್ಳಿ ಡ್ಯಾಂನಿಂದ ಕೆಳಗಡೆ ಇವೆ. ಆದರೆ, ನೀವು ಕೊಡುತ್ತಿರುವ ಉತ್ತರ ಏನು? ನಾನು ನೀರಾವರಿ ಮಂತ್ರಿಗಳ ಮೇಲೆ ಆಪಾದನೆ ಮಾಡುತ್ತಿಲ್ಲ. ಅದರೆ, ಮೊದಲನೇ ಪ್ರಶ್ನೆಗೆ ನೀರಾವರಿ ಮಂತ್ರಿಯವರಿಂದ ಸರ್ಕಾರದ ಉತ್ತರವನ್ನು ಯಾವ ರೀತಿಯಾಗಿ ತಪ್ಪಾಗಿ ಕೊಡಿಸುತ್ತಿದ್ದಾರೆಂಬುದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಎರಡನೆಯದು ಏನೆಂದರೆ, ಮುಳಗಡೆಯಾಗಿರುವ ಪ್ರದೇಶಗಳಿಗೆ ಪದೇಪದೆ ಮಾಡಿ ಎಂದು ನಾನು ಕೇಳುತ್ತಿಲ್ಲ. ಅದರೆ, ಹೊಳೆನರಸೀಪುರ ತಾಲ್ಲೂಕಿನ 13 ವರ್ಷ ಹಿಂದೆಯೇ 4(1) ನೋಟಿಫಿಕೇಷನ್ ಆಗಿರುವ ಕಟೆಬೆಳಗುಳಿ, ಒಡ್ಡರಹಳ್ಳಿ ಪಾಳ್ಯದಲ್ಲಿ ನಿಜವಾಗಿಯೂ ಕಲ್ಲು ಒಡೆಯುವ ಒಡ್ಡರು ಮಾತ್ರ ಇದ್ದಾರೆ. ಆದ್ದರಿಂದ, ಇಲ್ಲಿಗೆ ಏನಾದರು ಮಾಡಿ ಇಲ್ಲದ್ದಿದರೆ ತೆಗೆದು ಹಾಕಿ. 3 ಸಾರಿ 4(1) ಮಾಡಿದ್ದಾರೆ ಮತ್ತೆ 6(1) ಮಾಡಿದ್ದಾರೆ. ಅವಾರ್ಡ್ ಆಗುವ ಸಮಯಕ್ಕೆ ದುಡ್ಡು ಕೊಡುವುದಿಲ್ಲವೆಂದು ವಜಾ ಮಾಡುತ್ತಾರೆ. ಮತ್ತೆ ಈ ಸಮಯಕ್ಕೆ ನಮ್ಮ ಸರ್ಕಾರ ಕೂಡ ಬಿದ್ದು ಹೋಗುತ್ತದೆ. ಪ್ರತಿಸಾರಿಯೂ ಕೂಡ ಇದೇ ರೀತಿಯಾಗಿದೆ. ನಿಮ್ಮ ಬಗ್ಗೆ ನಾನು ಹೇಳುತ್ತಿಲ್ಲ. ತಾವು ತಪ್ಪು ಅರ್ಥ ಗ್ರಹಿಸಬೇಡಿ. ಮೊನ್ನೆದಿವಸ ತಾವು ಗೊರೂರಿಗೆ ಬಂದು ಸಭೆ ಮಾಡಿ ಇದೆಲ್ಲವನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದೀರಿ. ನಾನು ಹೇಳುವುದೇನೆಂದರೆ, 4(1) ಮಾಡುವುದಕ್ಕೆ 13 ವರ್ಷ ಬೇಕೇ? ನಮ್ಮ ಸರ್ಕಾರ ಇದ್ದಾಗ ತಪ್ಪು ಮಾಡಿದ್ದೇವೆ. ನೀವು ನಮ್ಮನ್ನು ಬಿಟ್ಟುಬಿಡಿ. ಆದರೆ, ನೀವು ಕೂಡ ತಪ್ಪು ಮಾಡುತ್ತೀರಾ? ನಾನು ಹೇಳುವುದೇನೆಂದರೆ, ನಿಜವಾಗಿರತಕ್ಕಂಥದ್ದಕ್ಕೆ 4(1), 6(1) ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ರೇವಣ್ಣನವರೆ, ಇದರ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ಸಚಿವರೆ, ನಾನು ಇನ್ನು ಯೀಲ್ಡ್ ಆಗಿಲ್ಲ, ನಾನು ಮಾತನಾಡಿದ ಬಳಿಕ ತಾವು ಮಾತನಾಡಿ. ಈಗ ಮಧ್ಯದಲ್ಲಿ ವಿಷಯವನ್ನು ಡೈವರ್ಟ್ ಮಾಡುವುದು ಬೇಡ. ಒಂದು ನಿಮಿಷ ನಾನು ಹೇಳಿ ಮುಗಿಸುತ್ತೇನೆ. ಮುಳುಗಡೆ ಹಳ್ಳಿಗೆ 1.33 ಕೋಟಿ ರೂಪಾಯಿ ಇಟ್ಟಿದ್ದೀರಿ. ಆದರೆ, ಇದು ಆಗುವುದಿಲ್ಲವೆಂದು ಮಾನ್ಯ ಸಚಿವರೆ ಒಪ್ಪಿಕೊಂಡಿದ್ದಾರೆ. ನೋಟಿಫಿಕೇಷನ್ ಆಗಿರುವಂಥ ಸುಮಾರು 50 ಹಳ್ಳಿಗಳಿವೆ. ಇದಕ್ಕೆ 4(1), 6(1) ಆಗಬೇಕು. ಮತ್ತೆ ಕೆಲವು ಅವಾರ್ಡ್ ಆಗುವ ಹಂತದಲ್ಲಿವೆ. ಈ ವರ್ಷ ಇದಕ್ಕೆ ಎಷ್ಟು ಹಣ ಇಡುತ್ತಾರೆಂದು ಮತ್ತು ಯವಾಗ ಮುಗಿಸುತ್ತಾರೆಂದು ಹೇಳಬೇಕು. ಇದರ ಜೊತೆಗೆ ಮೂಲಭೂತಸೌಕರ್ಯ ಕೊಡಬೇಕಾಗುತ್ತದೆ. ಹಿಂದೆ ಮಾನ್ಯ ಕುಮಾರಸ್ವಾಮಿಯವರ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಡ್ಯಾಂ ಕೆಳಗಡೆಇರುವ ಆನೆಕೆರೆ ಗ್ರಾಮ ಮುಳುಗಡೆಯಾಗುತ್ತದೆಂಬ ಪ್ರಸ್ತಾವನೆ ಬಂದಿತ್ತು. ಆ ಪ್ರಪೋಸಲ್‌ಗೆ ಹಿಂದೆ ಮಾನ್ಯ ಕುಮಾರಸ್ವಾಮಿಯವರ ಸರ್ಕಾರದಲ್ಲಿ ಅನುಮತಿಯನ್ನು ಕೊಟ್ಟಿದ್ದಾರೆ. ಅರಕಲಗೂಡು ತಾಲ್ಲೂಕು ಇರಬಹುದು. ಆಲೂರು ತಾಲ್ಲೂಕಿನ ಸುಮಾರ 14 ಹಳ್ಳಿಗಳಿಗೆ ಹಿಂದಿನ

ಸರ್ಕಾರದಲ್ಲಿ ಮಾನ್ಯ ನಾಗೇಗೌಡರು ಇದ್ದಾಗ ಸಕಲೇಶಪುರ ಕ್ಷೇತ್ರದ ಬಗ್ಗೆ ಸ್ಪೇಷಿಫಿಕ್ಕಾಗಿ ಹೇಳುತ್ತೇನೆ. 14 ಹಳ್ಳಿಗಳಿಗೆ 10 ಕೋಟಿ ರೂ.ಗಳ ಹಣವನ್ನು ಮಾನ್ಯ ಜೆ.ಹೆಚ್.ಪಟೇಲ್‌ರವರು ಇದ್ದಾಗ ಕೊಟ್ಟಿದ್ದಾರೆ. ಇವತ್ತಿನವರೆಗೂ ಅದಕ್ಕೆ ಏನು ಕ್ರಮ ತೆಗೆದುಕೊಂಡಿಲ್ಲ. ದಯಮಾಡಿ ಹಿನ್ನೀರಿನಿಂದ ಬರುವಂಥ ಆ ಹಳ್ಳಿಗಳಲ್ಲಿ ಇವತ್ತು ಹೋಗುವುದಕ್ಕಾಗುವುದಿಲ್ಲ. ದಯಮಾಡಿ ಈ 14 ಹಳ್ಳಿಗಳನ್ನು ಈ ವರ್ಷಕ್ಕೆ ಎಷ್ಟು ಹಣವನ್ನು ಇಡುತ್ತಾರೆ? ನನಗೆ ಬೇರೆ ಏನು ಬೇಡ. ಆ ರೈತರು ಏನಿದ್ದಾರೆ ಅವರಿಗೆ ದುಡ್ಡು ಕೊಡುವುದು. ಅವರಿಗೆ ರಸ್ತೆ, ಕುಡಿಯುವ ನೀರು ಕೊಡಬೇಕು. ಮಾನ್ಯ ಸಚಿವರು ಆನೆಕೆರೆ ದೇವಸ್ಥಾನದ ಬಗ್ಗೆ ಒಪ್ಪಿಕೊಂಡಿದ್ದಾರೆ, ಅದನ್ನು ಮಾಡಿಕೊಡುತ್ತೇನೆಂದು ಅವರು ಹೇಳಿದ್ದಾರೆ. ಅಲ್ಲಿ ಇರುವುದು ನಮ್ಮ ಸಮಾಜ ಅಲ್ಲ. ಅಲ್ಲಿ ಎಲ್ಲಾ ಮೈನಾರಿಟಿ ಕಮ್ಯೂನಿಟಿಯ ಬೆಸ್ತರು ಇದ್ದಾರೆ. ನಮ್ಮ ಸಮಾಜದ ಸಲುವಾಗಿ ರೇವಣ್ಣನವರು ಕೇಳುತ್ತಾರೆನ್ನುವುದು ಬೇಡ. ಮಾನ್ಯ ಮಂತ್ರಿಗಳಿಗೆ ಗೊತ್ತಿದೆ ಅವರು ಮಾಡಿಕೊಡುತ್ತೇವೆಂದು ಹೇಳಿದ್ದಾರೆ. ಅದರ ಜೊತೆಗೆ ಕಾಮಗಾರಿಗಳಾದ ರಸ್ತೆ, ಕುಡಿಯುವ ನೀರು, ದೇವಸ್ಥಾನ, ಸಮುದಾಯ ಭವನ, ಇವುಗಳಿಗೆ ಹಣ ಇಡಬೇಕು. ಹೇಮಾವತಿ ಕೆಳಗಡೆ ಬರುವಂಥ 6 ತಾಲ್ಲೂಕುಗಳಲ್ಲಿ ಯಾವಾಗ ಕಾಮಗಾರಿಯನ್ನು ಮುಗಿಸುತ್ತಾರೆನ್ನುವ ಬಗ್ಗೆ ದಯಮಾಡಿ ತಿಳಿಸಬೇಕೆಂದು ಮನವಿಯನ್ನು ಮಾಡುತ್ತೇನೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಈಗ ಮುಳುಗಡೆ ಆಗುತ್ತಿರುವ ಗ್ರಾಮಗಳಿಗೆ ದುಡ್ಡು ಕೊಡುವುದರ ಬಗ್ಗೆ ಚರ್ಚೆಯಾಯಿತು. ಚನ್ನರಾಯಪಟ್ಟಣ ನನ್ನ ವಿಧಾನಸಭೆ ಕ್ಷೇತ್ರದಲ್ಲಿ ಸೇರಿದ್ದು, ಆ ಹಳ್ಳಿಗಳು 15% ನೀರಾವರಿ ಕ್ಷೇತ್ರ ಆಗಿಲ್ಲ. ಆದರೆ ಅದರ ಫಲ ಊಟ ಮಾಡುವವರು, ತುಮಕೂರು, ಮಂಡ್ಯ ಜಿಲ್ಲೆಯವರು ಮತ್ತು ಶಿರಾ ಪಟ್ಟಣದವರು. ಕುಡಿಯುವ ನೀರು ಕೊಡತಕ್ಕಂಥ ಒಂದು ದೊಡ್ಡ ಕಾರ್ಯ ಆಗಿರುವಂಥ ಈ ಒಂದು ಸಂದರ್ಭದಲ್ಲಿ ಮುಳುಗಡೆ ಆಗಿರತಕ್ಕಂಥ ಹಳ್ಳಿಗಳು ಆ ಚನ್ನರಾಯಪಟ್ಟಣ ತಾಲ್ಲೂಕಿಗೆ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಕ್ಕೆ ಸೇರತಕ್ಕಂಥ ಬಂಡಿಹಳ್ಳಿ, ಅಳ್ಳಾಪುರ, ಶ್ರವಣೇರಿ ಈ ತರಹ 6(1) 4(1) ನೋಟಿಫಿಕೇಷನ್ ಆಗಿರುತ್ತದೆ. 50% ದುಡ್ಡು ಕೊಟ್ಟಿದ್ದಾರೆ. ಇದಕ್ಕೆ ಒಬ್ಬ ಕಂದಾಯ ಇಲಾಖೆಯ ಕಾರ್ಯದರ್ಶಿ ಅಥವಾ ಜಲಸಂಪನ್ಮೂಲ ಕಾರ್ಯದರ್ಶಿಯವರು 50% ದುಡ್ಡು ಕೊಟ್ಟು ಆ ಕೆಲಸ ಅರ್ಧಕ್ಕೆ ನಿಲ್ಲಿಸಿಬಿಟ್ಟರೆ ಹೇಗೆ? ಇದು ಆಗಬಾರದು ಸ್ವಾಮಿ. ಸರ್ಕಾರ ಹೋಗುತ್ತವೆ, ಬರುತ್ತವೆ. ಅವರೆಲ್ಲರೂ ಕೂಲಿ ಮಾಡುವವರು, ಕೆನಾಲ್ ತೆಗೆದಿರುವುದರಿಂದ ಆ ತಾಲ್ಲೂಕಿನಲ್ಲಿ ಊರು ಮುಳುಗಡೆ ಆಯಿತು. ಒಂದು ಊರಿನಲ್ಲಿ ಒಂದು ದೊಡ್ಡ ಪ್ರತಿಭಟನೆ ಆಯಿತು. ರುದ್ರಹಾಳದಲ್ಲಿ ನೀರು ಕೊಡುವಂತೆ ನಮ್ಮ ಜನ ರಕ್ತ ಕೊಟ್ಟಿದ್ದಾರೆ. ನೀವು ಆ ರೈತರಿಗೆ 2–3 ಕೋಟಿ ರೂ.ಗಳನ್ನು ಮುಳುಗಡೆ ಆಗಿರುವ ಪ್ರದೇಶಕ್ಕೆ ಕೊಡುವುದಕ್ಕೆ ಹಿಂದೆ ಮುಂದೆ ಮಾಡಿ,

ರೇವಣ್ಣ ಮತ್ತು ಪುಟ್ಟೇಗೌಡರ ಮೇಲೆ ದ್ವೇಷ ಇದ್ದರೆ, ರಾಜಕೀಯವಾಗಿ ತೀರಿಸಿಕೊಳ್ಳೋಣ. ಬಡವರ ಮೇಲೆ ಬೇಡ.

ಶ್ರೀ ಬಸವರಾಜ ಬೊಮ್ಮಾಯಿ: ನಾವು ಯಾವುದಾದರೂ ದ್ವೇಷ ಮಾಡಿದ್ದೇವೆಯಾ? ನೀವು ಇದರಲ್ಲಿ ರಾಜಕೀಯ ಬೆರಸಬೇಡಿ. ನೀವು ನೇರವಾಗಿ ಪ್ರಶ್ನೆಯನ್ನು ಕೇಳಿ, ಉತ್ತರವನ್ನು ಕೊಡುತ್ತೇವೆ.

ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲೆಯ ರೈತರು, ಈ ರಾಜ್ಯ ಮತದಾರರು ಅಲ್ಲವೆ? ದಯಮಾಡಿ ಆ ರೀತಿ ಆಗಬಾರದು, ಅದನ್ನು ಸರಿಪಡಿಸಬೇಕು.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ, 50 ಹಳ್ಳಿಗಳ ಪುನರ್ವಸತಿ ಕಾಲೋನಿಗಳ ಹೆಸರುಗಳನ್ನು ಹೇಳಿದಿರಿ. ಇದರಲ್ಲಿ 24 ಹಳ್ಳಿಗಳು ನನ್ನ ಕ್ಷೇತ್ರದಲ್ಲಿ ಬರುತ್ತವೆ. ಆಲೂರು ತಾಲ್ಲೂಕಿನಲ್ಲಿ 19 ಹಳ್ಳಿಗಳು, ಕಟ್ಟಾಯ ಹೋಬಳಿಯಲ್ಲಿ 5 ಹಳ್ಳಿಗಳು ಬರುತ್ತವೆ. ಮಾನ್ಯ ರೇವಣ್ಣನವರು ಏನು ಹೇಳಿದರು ಅದು ಎಲ್ಲಾ ಸತ್ಯ ಇದೆ. ಇದರಲ್ಲಿ ನಾವು ಹಿಂದಿನಿಂದ ಏನು ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ತಾವು ಮೊನ್ನೆ ಗೋರೂರಿಗೆ ಬಂದಾಗ ಎಲ್ಲರೂ ಒಟ್ಟಿಗೆ ಹೇಳಿರುತ್ತೇವೆ. ಅನೇಕ ಕಾಮಗಾರಿಗಳು ಮಂಜೂರಾಗಿರುವಂಥವುಗಳು ಪ್ರಾರಂಭವಾಗಿಲ್ಲ, ಪ್ರಾರಂಭವಾಗಿರುವಂಥವು ಇನ್ನು ಕೂಡ ಪೂರ್ಣಗೊಂಡಿಲ್ಲ, ಅಪೂರ್ಣವಾಗಿರುವಂಥ ಕಾಮಗಾರಿಗಳು ತುಂಬಾ ಇವೆ. ತಾವು ಉತ್ತರದಲ್ಲಿ ಏನು ಹೇಳಿದಿರಿ. ಈ ವರ್ಷದಲ್ಲಿ ನಿಗದಿಯಾದ ಹಣ ಕೇವಲ 70 ಲಕ್ಷ ರೂ.ಗಳು, ತಾವೇ ಉತ್ತವನ್ನು ಕೊಟ್ಟಿದ್ದೀರಿ. ಹೇಮಾವತಿ ಜಲಾಶಯಕ್ಕೆ ನೀರು ಕೊಡುತ್ತಿರುವವರಲ್ಲಿ ನಾವು 60 ಭಾಗ ಕೊಡುತ್ತೇವೆ. ಸಕಲೇಶಪುರ ಕ್ಷೇತ್ರದಿಂದ ಬರತಕ್ಕಂಥ 60 ಭಾಗ ನೀರು ಹೇಮಾವತಿ ಜಲಾಶಯದಿಂದ ತುಂಬುತ್ತದೆ. ಉಳಿದದ್ದು ಚಿಕ್ಕಮಗಳೂರು ಜಿಲ್ಲೆಗೆ ಬರುತ್ತದೆ. ಆದರೂ ನಾವು ನೀರನ್ನು ಸ್ವಲ್ಪವೂ ಬಳಸಿಕೊಳ್ಳುತ್ತಿಲ್ಲ. ಕನಿಷ್ಟ ಪುನರ್ವಸತಿ ಕಾಲೋನಿಗಳಿಗೆ ನಾವು ಏನು ಸಹಾಯ ಮಾಡುವುದಕ್ಕಾಗಿಲ್ಲವೆಂದರೆ, ಹೇಗೆ ಸರ್ಕಾರ 2008–09ರಲ್ಲಿ 380 ರೂ.ಗಳನ್ನು ಕೊಟ್ಟಿದ್ದರು. ಇವರು ಕೇವಲ 70 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ನೀವು ಏನು ಆಗಬೇಕೆಂದು ಸ್ಪೇಸಿಫಿಕ್ಕಾದ ಪ್ರಶ್ನೆಯನ್ನು ಕೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಉಳಿದ ಕೆಲಸಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಪಾಪ ಕುಮಾರಸ್ವಾಮಿಯವರು ಹೇಳಿದರು. ಹಾಸನ ಜಿಲ್ಲೆಯಲ್ಲಿ ಡ್ಯಾಂ ಕಟ್ಟಿರುವುದರಿಂದ ಇವತ್ತು ತುಮಕೂರು, ಮಂಡ್ಯ ಜಿಲ್ಲೆಗೆ ನೀರಾವರಿ ಆಗುತ್ತಿದೆ. ಹಾಸನ ಜಿಲ್ಲೆಯಲ್ಲಿ ಕೇವಲ 800 ಎಕರೆ ಮಾತ್ರ ನೀರಾವರಿ ಆಗುತ್ತಿದೆ. ಜಮೀನು ಮುಳುಗಡೆ ಆಗಿರುವುದು ಅಲ್ಲಿ, 19

ಹಳ್ಳಿಗಳು ಮುಳುಗಡೆ ಆಗಿರುವುದು ಅಲ್ಲಿ. ಆ ಭಾಗದಿಂದ ಮೂರು ಜಿಲ್ಲೆಗೆ ನೀರು ಕೊಡುತ್ತಿರುವಂಥ ಜನರಿಗೆ, at least ಅನುಕೂಲ ಮಾಡುವುದಕ್ಕೂ ಸರ್ಕಾರ ಏಕೆ ಹಿಂದೇಟು ಹಾಕಬೇಕು? ಕೇವಲ 800 ಎಕರೆ, ಮಾನ್ಯ ಮಂತ್ರಿಗಳು ಇಲ್ಲವೆಂದರೆ ನಾನು ವಾಪಸ್ಸು ತೆಗೆದುಕೊಂಡು ಬಿಡುತ್ತೇನೆ.

ಅಧ್ಯಕ್ಷರು: ಮಾನ್ಯ ಕುಮಾರಸ್ವಾಮಿಯವರೆ, ಈ ಪ್ರಶ್ನೆಗೆ ಸಾಕಷ್ಟು ಸಮಯವಾಗಿದೆ. specific ಆದ ಪ್ರಶ್ನೆಯನ್ನು ಕೇಳಿ, ಏನಾಗಬೇಕೆಂದು ಹೇಳಿ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, 17 ಹಳ್ಳಿಗಳಲ್ಲಿ ಹುಲ್ಲು ಹಾಕಿಕೊಂಡು ಗೋಣಿ ಚೀಲದ ಮೇಲೆ ಮಲಗುತ್ತಿದ್ದಾರೆ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಪುನರ್ ವಸತಿ ಮತ್ತು ಹೇಮಾವತಿ Division ವರ್ಕ್ಸ್ ಬಗ್ಗೆ, ನಾನು ಈಗಾಗಲೇ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ. ಅದರಲ್ಲಿ ಮುಖ್ಯವಾದ ಎರಡು ವಿಷಯಗಳನ್ನು ಎತ್ತಿದ್ದಾರೆ. ಸೀತಪೀಡಿತ ಹಳ್ಳಿಗಳಿಗೆ compensation ದುಡ್ಡು ಕೊಡುವುದು ಲೇಟಾಗುತ್ತಿದೆ. 13 ವರ್ಷದಿಂದ 4(1)ಆಗಿದೆ, 6(1)ಆಗಿದೆ, ಅವಾರ್ಡ್ ಆಗಿದೆ, ಆದರೂ ಕೂಡ ಡಿಲೇ ಏಕೆ ಆಗುತ್ತಿದೆ. ನೀವು ಹೇಳಿದ್ದು ಎಲ್ಲವೂ ಸರಿ ಇದೆ. ಅಷ್ಟೆ ಸೂಕ್ಷ್ಮವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ 13 ವರ್ಷ ಡಿಲೇ ಆಗುವುದಕ್ಕೆ ನಾವು ಅಥವಾ ನಮ್ಮ ಸರ್ಕಾರ ಕಾರಣ ಅಲ್ಲ. ಇದಕ್ಕೆ ಯಾರು ಕಾರಣೀಭೂತರು ಎನ್ನುವುದನ್ನು ನಾವು ಹುಡುಕುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಜನರಿಗೆಲ್ಲಾ ಗೊತ್ತಿದೆ. ಅಲ್ಲಿರುವಂಥ ತಕರಾರುಗಳು, ಯಾವ್ಯಾವುದಕ್ಕೆ ಕಾರಣ, ಕೋರ್ಟ್‌ಗಳ ಬಗ್ಗೆ ಎಲ್ಲವೂ ಇದೆ, ಆದರೆ ಇಲ್ಲಿ ಮುಖ್ಯವಾದ ಪ್ರಶ್ನೆ ಅದು ಅಲ್ಲ. ಸೀತಪೀಡಿತ ಪ್ರದೇಶದ ಹಳ್ಳಿಗಳಿಗೆ compensation ಎಷ್ಟು ಕೊಡಬೇಕು, ಏನು ಕೊಡಬೇಕು ಎನ್ನುವುದು ಇದೊಂದು ಪಾಲಿಸಿ ಮ್ಯಾಟರ್ ಇದೆ. ಎಲ್ಲಾ ಜಲಾಶಯಗಳ ಹಿನ್ನೀರಿನಲ್ಲಿ ಏನು ಮುಳುಗಡೆ ಆಗುತ್ತವೆ. ಇದರಲ್ಲಿ ಕೆಲವು ಸಬ್‌ಮರ್ಜ್ ಆಗುತ್ತದೆ. ಇನ್ನು ಕೆಲವು partial sub merge ಆಗುತ್ತವೆ. ಇದರ ಬಗ್ಗೆ ಯಾವ ಸರ್ಕಾರ ಕೂಡ ಗಮನವನ್ನು ಹರಿಸಿಲ್ಲ. Revenue Department ನವರು ಇದರ ಬಗ್ಗೆ ನಾವು ಒಂದು ನೀತಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. partial ಗ್ರಾಮಗಳನ್ನು ಏನು ಕಂಪ್ಲೀಟ್ ಮುಳುಗಡೆ ಎಂದು ತೆಗೆದುಕೊಳ್ಳಬೇಕೆ? ಅಥವಾ partial ಎಂದು ತೆಗೆದುಕೊಳ್ಳಬೇಕೆ? ಯಾವ ರೀತಿ ತೆಗೆದುಕೊಳ್ಳಬೇಕು, ಏನು ಮಾನದಂಡ ಎನ್ನುವುದು policy matter ಆಗುತ್ತಿದೆ. Specific ಆಗಿ 4(1) 6(1) ಅವಾರ್ಡ್ ಆಗಿದೆ, ಅದಕ್ಕೆ ಕೂಡಲೇ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. Re-habilitation centre ಗಳಲ್ಲಿ ಏನೇನು work ಗಳು ಆಗಿಲ್ಲ, ಮೂಲಭೂತ ಸೌಕರ್ಯಗಳು ಆಗಿಲ್ಲವೆಂದು ಹೇಳಿದ್ದೀರಿ. ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಮೊನ್ನೆ ನಡೆದಂಥ ಸಭೆಯಲ್ಲಿ ನನ್ನ ಗಮನಕ್ಕೆ ಬಂದ ಮೇಲೆ

ಹೇಳಿದ್ದೇನೆ. ಯಾವ್ಯಾವುದು ಅಪೂರ್ಣವಾಗಿದೆ ಅವುಗಳನ್ನು ಮೊದಲು ಪೂರ್ಣಗೊಳಿಸುವುದು. ಯಾವುದು ಅವಶ್ಯಕತೆ ಇದೆ, ಆ ಎಲ್ಲಾ ಕೆಲಸಗಳನ್ನು ನಮ್ಮ Chief Engineer ಗೆ ಆದೇಶವನ್ನು ಮಾಡಿದ್ದೇನೆ. ಎಲ್ಲದಕ್ಕೂ immediate ಆಗಿ estimate ಮಾಡಿ ತೆಗೆದುಕೊಂಡು ಬನ್ನಿ, immediately emergency ಯಾವ್ಯಾವುದು works ಬೇಕು ಎನ್ನುವುದನ್ನು ತೆಗೆದುಕೊಂಡು ಬನ್ನಿ, ಈ ವರ್ಷದಲ್ಲಿ ಆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ನಿರ್ಧಾರವನ್ನು ಮಾಡಿದ್ದೇವೆ. ತಾವು specific ಆಗಿ ಕೆಲವು ಮೂಲಭೂತ ಸೌಕರ್ಯಗಳ ಬಗ್ಗೆ ಪ್ರಶ್ನೆ ಎತ್ತಿದ್ದೀರಿ, ಅಲ್ಲಿ ಅಪ್ರೋಚ್ ಇಲ್ಲ, ಬ್ರಿಡ್ಜ ಇಲ್ಲ, ರಸ್ತೆ, ಸಮುದಾಯ ಭವನ ಬಗ್ಗೆ ಹೇಳಿದ್ದೀರಿ. ಎಲ್ಲದಕ್ಕಿಂಥ ಆಶ್ಚರ್ಯವೆಂದರೆ, ಗೋರೂರಿನಲ್ಲಿ ಡ್ಯಾಂ ಇದೆ, ಅಲ್ಲಿರುವ ಜನರಿಗೆ re-habilitation ಮಾಡಿಲ್ಲ. ಇಷ್ಟು ವರ್ಷ ಏಕೆ ಮಾಡಲಿಲ್ಲ, ಅದಕ್ಕೆ ಏನು ಕಾರಣ? ಆ ಜನ ಎಲ್ಲಾ ಬಂದಿದ್ದರು. ಅದನ್ನು ಕೂಡ ನಾನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದೇನೆ.

ಅಧ್ಯಕ್ಷರು: ರೇವಣ್ಣನವರೆ, ಅವರು ಉತ್ತರವನ್ನು ಕಂಪ್ಲೀಟ್ ಮಾಡಲಿ. ಹಾಗಾದರೆ ನಾನು ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ಗೋರೂರು ಕೂಡ ಮಾನ್ಯ ಕುಮಾರಸ್ವಾಮಿಯವರು ಇದ್ದಾಗ 4(1)6(1)ಆಗಿರುತ್ತದೆ.

ಶ್ರೀ ಎಸ್.ಆರ್.ಬೊಮ್ಮಾಯಿ: ಆವರ ಹೇಳಿಕೆಯನ್ನು ಪಡೆದುಕೊಂಡು ಎಲ್ಲಾ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಭೂಮಿ ಕಳೆದುಕೊಂಡವರಿಗೆ ನೀಡಿರುವ ಪರಿಹಾರದ ಬಗ್ಗೆ.

35(1)77 Sir. Eshwar Bheemanna Khandre.

Bhalki Basavaraja Bommai. (Minister for Water Resources).

ಅ) ಬೀದರ ಜಿಲ್ಲೆಯಲ್ಲಿ ಯಾವ ಯಾವ ನೀರಾವರಿ ಯೋಜನೆಗಳಿಂದ ರೈತರು ಭೂಮಿ ಕಳೆದು ಕೊಂಡು ಸಂತ್ರಸ್ತರಾಗಿದ್ದಾರೆ; ಈ ಜನರಿಗೆ ಇಲ್ಲಿಯವರೆವಿಗೆ ಯಾವ ಬದಲಿ ವ್ಯವಸ್ಥೆಗಳನ್ನು ಮಾಡಲಾಗಿದೆ: (ಯೋಜನೆಗಳ ವಿವರಗಳನ್ನು ಒದಗಿಸುವುದು);

ಆ) ಸಂತ್ರಸ್ತರಾದವರಲ್ಲಿ ಇಲ್ಲಿಯವರೆವಿಗೆ ಎಷ್ಟು ಜನರಿಗೆ ಎಷ್ಟು ಮೊತ್ತದ ಪರಿಹಾರವನ್ನು ನೀಡಲಾಗಿದೆ. ; (ಯೋಜನೆವಾರು ಅಂಕಿ ಅಂಶಗಳನ್ನು ಒದಗಿಸುವುದು).

ಇ) ನೀಡಿದಲ್ಲಿ, ಇನ್ನೂ ಎಷ್ಟು ಜನ ಸಂತ್ರಸ್ತರಿಗೆ ಎಷ್ಟು ಮೊತ್ತದ ಪರಿಹಾರವನ್ನು ಕೊಡಬೇಕಾಗಿದೆ: ಇಷ್ಟು ದಿನಗಳಿಂದ ಈ ಪ್ರಕರಣಗಳು ಬಾಕಿ ಇವೆ ಮತ್ತು ಈ